ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.575/2023

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಬಾಲಪ್ಪ** | | |
| **ತಂದೆಃಹೆಸರು** | **ಈರಪ್ಪ** | **ಪಿಡಬ್ಲೂಃ** | **6** |
| **ವಯಸ್ಸು** | **60 ವರ್ಷ** | **ಸಿಡಬ್ಲೂಃ** | **7** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಸೋಮಲಾಪುರ.** | | |

**ದಿನಾಂಕ 28-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 2 ರಿಂದ 4 ನೇ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-6 ನನ್ನ ಅಣ್ಣ. ಚಾಸಾ-4 & 5 ರವರು ಚಾಸಾ-6 ರವರ ಮಕ್ಕಳು. ಚಾಸ-1 ಚಾಸಾ-6 ರವರ ಹೆಂಡತಿ. ಚಾಸಾ-8 & 9 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ.

ಅಂಬಾಮಠದ ಬಳಿ ಒಡ್ಡರ ವೀರೇಶ್ ರವರಿಗೆ ಸಂಬಂಧಿಸಿದ ಸರ್ವೆ ನಂ.175 ರಲ್ಲಿ 1 ಎಕರೆ ಜಮೀನನ್ನು ರೂ.25,000/- ಕ್ಕೆ ಗುತ್ತಿಗೆಗೆ ಚಾಸಾ-4 ರವರಿಗೆ ಉಳುಮೆ ಮಾಡಲು ಕೊಟ್ಟಿದ್ದರು. ಚಾಸಾ-4 ರವರು ವೀರೇಶ್ ರವರಿಗೆ ಹೊಲ ಒಣಗುತ್ತಿದೆ ನೀರೇಕೆ 1 ನೇ ಆರೋಪಿಗೆ ಕೊಟ್ಟೆ ಎಂದು ಕೇಳಿದರು. 1 ನೇ ಆರೋಪಿಯ ಹೊಲ ಒಣಗುತ್ತಿದೆ, ಆದ್ದರಿಂದ ನೀರು ಕೊಟ್ಟೆ ಎಂದು ಹೇಳಿದನು. ಆಗ ಚಾಸಾ-4 ಆರೋಪಿಗೆ ನನ್ನನ್ನು ಕೇಳದೇ ನೀನು ಏಕೆ ನೀರು ತೆಗೆದುಕೊಂಡೆ ಎಂದು ಪ್ರಶ್ನಿಸಿದನು.

ಆಗ ನಾನು, ಚಾಸಾ-6, ಚಾಸಾ-1, ಚಾಸಾ-4, 5 ಇದ್ದೆವು. ಚಾಸಾ-4 ರವರು 1ನೇ ಆರೋಪಿಗೆ ಫೋನ್ ಮಾಡಿ ಕೇಳಿದಾಗ, ನಿನ್ನನ್ನೇನು ಕೇಳಬೇಕು, ನಿಮ್ಮ ಆಸ್ತಿ ಅಲ್ಲ, ನೀವು ಹೊಲದಲ್ಲೇ ಇರಿ ಬರುತ್ತೇನೆ ಎಂದು ಹೇಳಿದನು. ಆಗ 11-30 ರಿಂದ 12 ಗಂಟೆ ಆಗಿತ್ತು. ನಂತರ ಆರೋಪಿತರು 1 ಗಂಟೆಯ ಸುಮಾರಿಗೆ ಹೊಲಕ್ಕೆ ಬಂದು ಒಮ್ಮೆದೊಮ್ಮೆಲೆ ಎಲ್ಲಾ ಆರೋಪಿತರು ಸೇರಿ ಚಾಸಾ-4 ರವರಿಗೆ ನೆಲಕ್ಕೆ ಕೆಡವಿ, ಮೊಣಕೈಯಲ್ಲಿ ಇರಿದು, ಮೈಕೈಗೆ ಹೊಡೆದರು. ನಾನು ಬಿಡಿಸಲು ಹೋದಾಗ 2, 3 & 4ನೇ ಆರೋಪಿತರು ನನ್ನ ತಲೆ ಕೂದಲು ಹಿಡಿದು ನನಗೆ ಹೊಡೆದರು. ಚಾಸಾ-5 ರವರು ಬಿಡಿಸಲು ಬಂದಾಗ 1ನೇ ಆರೋಪಿಯ ಕೈಯಲ್ಲಿ ಕುಡುಗೋಲು ಇತ್ತು, ಜಗಳ ಬಿಡಿಸಲು ಹೋದಾಗ 1ನೇ ಆರೋಪಿ ಚಾಸಾ-5 ರವರ ಬಲಗೈ ಹೆಬ್ಬೆರಳಿಗೆ ಕುಡುಗೋಲಿನಿಂದ ಹೊಡೆದನು, ಅದರಿಂದ ಗಾಯವಾಯಿತು. ಚಾಸಾ-1 ರವರು ಬಿಡಿಸಲು ಬಂದಾಗ 1ನೇ ಆರೋಪಿ ಚಾಸಾ-1 ರವರನ್ನು ಹಿಡಿದು ಎಳೆದಾಡಿದನು. ನಂತರ ಕುಡುಗೋಲನ್ನು ಗದ್ದೆಯಲ್ಲೇ ಬಿಸಾಡಿದನು. ಆರೋಪಿತರು ನಿಮ್ಮನ್ನು ಕಡಿಯುತ್ತೇವೆ, ಹೊಡೆಯುತ್ತೇವೆ ಎಂದು ಬೆದರಿಕೆ ಹಾಕಿದರು. ನಂತರ 1ನೇ ಆರೋಪಿ ಚಾಸಾ-4 ರವರ ಮೇಲೆ ದೂರು ಕೊಟ್ಟಿದ್ದರು. ನಂತರ ಮರುದಿನ ನಾವು ದೂರು ಕೊಟ್ಟೆವು. ನಮ್ಮ ಪರವಾಗಿ ರೆಡ್ಡೆಪ್ಪ ದೂರು ಕೊಟ್ಟನು. ಸದರಿ ವಿಷಯವಾಗಿ ಪೋಲೀಸರು ನನ್ನನ್ನು ವಿಚಾರಣೆ ಮಾಡಿದ್ದರು. ಸದರಿ ಘಟನೆ 4 ವರ್ಷಗಳ ಹಿಂದೆ ನಡೆದಿತ್ತು.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು.ಮಾ. 1 ನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸಿರುತ್ತಾರೆ. ಸಾಕ್ಷಿಯು ಕಡತದಲ್ಲಿರುವ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**ಪಾಟೀ ಸವಾಲುಃಃ ಮಾನ್ಯ ಸ ಸ ಅ ರವರಿಂದಃ**

ದಿಃ 04.11.2022 ರಂದು ಮ.12 ಗಂಟೆಗೆ ಘಟನೆ ಆಗಿತ್ತು ಎಂದರೆ ಸಾಕ್ಷಿಯು ನನಗೆ ದಿನಾಂಕಗಳು ಗೊತ್ತಾಗುವುದಿಲ್ಲ, ಆದರೆ ಹೇಳಿ ಬರೆಸಿರುತ್ತೇನೆ. ಬಿಡಿಸಲು ಹೋದ ನಿಮಗೆ 2 & 4ನೇ ಆರೋಪಿತರು ನಿಮ್ಮ ಕೂದಲು ಹಿಡಿದು ಎಳೆದಾಡಿ, ಕೈಗಳಿಂದ ತಲೆಗೆ, ಬೆನ್ನಿಗೆ ಹೊಡೆದರು ಎಂದರೆ ಸಾಕ್ಷಿಯು 2 ರಿಂದ 4ನೇ ಆರೋಪಿತರು ನನಗೆ ಹೊಡೆದಿದ್ದರು ಎನ್ನುತ್ತಾರೆ. ಸಾಕ್ಷಿಯು ಅಲ್ಲಗಳೆದಿರುವ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು. ಚಾಸಾ-1 ರವರಿಗೆ 3ನೇ

ಆರೋಪಿ ಸೀರೆ ಹಿಡಿದು ಎಳೆದಾಡಿ ಅವಮಾನ ಮಾಡಿದ್ದರು ಎಂದು ಹೇಳಿ ಬರೆಸಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ಅಲ್ಲಗಳೆದಿರುವ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿತರೆಲ್ಲರೂ ಬಂದು 1ನೇ ಆರೋಪಿಯು ಹನುಮಂತನಿಗೆ ನಿನ್ನದೇನಲೇ ಸೂಳೆ ಮಗನೆ, ನಾವು ವೀರೇಶನಿಗೆ ಕೇಳಿಕೊಂಡು ನೀರು ಬಿಟ್ಟುಕೊಂಡಿರುತ್ತೇವೆ ಎಂದು ಬೈದಾಡಿರುತ್ತಾರೆ ಎಂದರೆ ಸರಿ. ಜಗಳ ಮುಗಿಯುವ ಕಾಲಕ್ಕೆ ಆರೋಪಿತರು ಲೇ ಸೂಳೆ ಮಕ್ಕಳೆ ಇನ್ನುಮುಂದೆ ಊರಲ್ಲಿ ನಮಗೆ ಎದುರಾಗಿ ಹೇಗೆ ಜೀವನ ಮಾಡುತ್ತೀರಿ ನೋಡಿಕೊಳ್ಳುತ್ತೇನೆ ಎಂದು ಜೀವದ ಬೆದರಿಕೆ ಹಾಕಿದ್ದರು ಎಂದರೆ ಸಾಕ್ಷಿಯು ಕೇವಲ 1ನೇ ಆರೋಪಿ ಮಾತ್ರ ಹಾಕಿದ್ದ ಎನ್ನುತ್ತಾರೆ. ನಂತರ ಜಗಳವನ್ನು ಚಾಸಾ-8 & 9 ರವರು ಬಿಡಿಸಿಕೊಂಡಿದ್ದರು ಎಂದರೆ ಸರಿ. ಉಳಿದ ಆರೋಪಿತರೂ ಸಹ ಕೆಟ್ಟ ಮಾತುಗಳಿಂದ ಬೈದಿರುತ್ತಾರೆ ಎಂದರೆ ಸರಿ. ದೂರನ್ನು ಚಾಸಾ-1 ರವರು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಹನುಮಂತ ಕೊಟ್ಟಿದ್ದಾರೆ ಎನ್ನುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

1. ನೀವು ಹೇಳಿಕೆ ಕೊಡುವ ಕಾಲಕ್ಕೆ ನನ್ನ ತಂದೆಯ ಹೆಸರು ಈರಪ್ಪ ಎಂದು ಹೇಳಿ ಬರೆಸಿರುತ್ತೇನೆ. ನನಗೆ 60 ವರ್ಷ ವಯಸ್ಸು ಎಂದು ಹೇಳಿ ಬರೆಸಿರುತ್ತೇನೆ.

2. ನಿಮ್ಮ ಹೆಸರು ಬಾಲಪ್ಪ ತಂದೆ ಬಸಪ್ಪ, ವ.40 ವರ್ಷ ನೀವೇನಾ ಎಂದರೆ ಸಾಕ್ಷಿಯು ನನ್ನ ಹೆಸರು ಬಾಲಪ್ಪ ತಂದೆ ಈರಪ್ಪ, ವ.60 ವರ್ಷ ಎನ್ನುತ್ತಾರೆ.

3. ಅವರಿಬ್ಬರ ನಡುವೆ ಲೀಸ್ ಆಗಿರಲಿಲ್ಲ. ಜಗಳದಲ್ಲಿ ವೀರೇಶಪ್ಪ ಇರಲಿಲ್ಲ. ಈರೇಶಪ್ಪನ ಹೊಲದ ಪಶ್ಚಿಮಕ್ಕೆ ಚಾಸಾ-4 ರವರ ಹೊಲ ಇದೆ. ಜಗಳ ನಮ್ಮ ಹೊಲದಲ್ಲಿ ಆಗಿತ್ತು. ಜಗಳ 1 ತಾಸು ಆಗಿತ್ತು. ಹೊಲದ ಸುತ್ತಮುತ್ತಲಿನ ಹೊಲದವರು 6-7 ಜನರು ಬಂದಿದ್ದರು, ಅವರ ಹೆಸರುಗಳು ನನಗೆ ಈಗ ನೆನಪಿಲ್ಲ.

4. ನೀವು ಸದರಿ ಹೊಲವನ್ನು ಮಾಡುವುದಕ್ಕಿಂತ ಮುಂಚೆ 1ನೇ ಆರೋಪಿ ಹೊಲ ಮಾಡುತ್ತಿದ್ದ ಎಂದರೆ ಮುಂಚೆ ಅವರು ಮಾಡುತ್ತಿದ್ದ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

5. ನೀವೆಲ್ಲರೂ ಸೇರಿ 1ನೇ ಆರೋಪಿಗೆ ಹೊಡೆದಿದ್ದಿರಿ ಎಂದರೆ ಸಾಕ್ಷಿಯು ಅವೆಲ್ಲರೂ ಸೇರಿ ನಮ್ಮ ಹೊಲದಲ್ಲಿ ಬಂದು ನಮಗೆ ಹೊಡೆದಿದ್ದರು. ಅದೇ ದಿನ ನಿಮ್ಮ ಮೇಲೆ 1ನೇ ಆರೋಪಿ ಕೇಸು ಮಾಡಿದ್ದರು ಎಂದರೆ ಸರಿ. ಗಲಾಟೆಯಲ್ಲಿ 1ನೇ ಆರೋಪಿಗೆ ಗಾಯಗಳಾಗಿದ್ದವು ಎಂದರೆ ನನಗೆ ಗೊತ್ತಿಲ್ಲ. ಗಲಾಟೆಯಾದ ದಿನ ನೀವು ಸಿಂಧನೂರಿಗೆ ಬಂದಿಲ್ಲ ಎಂದರೆ ಸಾಕ್ಷಿಯು ಇಲ್ಲ, ಚಾಸಾ-5 ರವರನ್ನು ಆಸ್ಪತ್ರೆಗೆ 4 ಗಂಟೆಗೆ ತಂದು ಸೇರಿಸಿದ್ದೆವು. ಚಾಸಾ-5 ರವರು 4 ದಿನ ಆಸ್ಪತ್ರೆಯಲ್ಲಿದ್ದರು. ರಕ್ತವು ಚಾಸಾ-5 ರವರ ಬಟ್ಟೆಗೆ ಹತ್ತಿರಲಿಲ್ಲ.

6. ಜಗಳವಾದ ದಿನವೇ ನಾನು, ಚಾಸಾ-1, 4 & 5 ರವರು ಠಾಣೆಗೆ ಹೋಗಿ ಪೋಲೀಸರಿಗೆ ವಿಷಯ ತಿಳಿಸಿದ್ದೆವು. ಆ ದಿನ ಠಾಣೆಯಲ್ಲಿ ದೂರು ಕೊಟ್ಟು ಊರಿಗೆ ಹೋಗಿದ್ದೆವು. ಅದಾದ ನಂತರ ದೂರು ಕೊಟ್ಟ ಮರುದಿನ ಪೋಲೀಸರು ಸ್ಥಳಕ್ಕೆ ಪಂಚನಾಮೆ ಮಾಡಿದ್ದರು, ಆಗ ನಾವು 5 ಜನ ಇದ್ದೆವು.

7. ನಿಮ್ಮೂರಿನಿಂದ ಸಿಂ.ಗ್ರಾ. ಠಾಣೆ 12 ಕಿ.ಮೀ. ದೂರದಲ್ಲಿದೆ ಎಂದರೆ ಸರಿ. ನಿಮ್ಮ ಮೇಲೆ ಇರುವ ಕೇಸಿಗೆ ನೀವು ನ್ಯಾಯಾಲಯಕ್ಕೆ ಓಡಾಡುತ್ತಿದ್ದೀರಿ ಎಂದರೆ ಸರಿ.

8. 1ನೇ ಆರೋಪಿ ನಿಮ್ಮ ಮೇಲೆ ಕೇಸು ಮಾಡಿದ್ದರಿಂದ ನಿಮ್ಮದೂ ಒಂದು ಇರಲಿ ಎಂದು ನೀವು ಸಹ ಒಂದು ಕೇಸು ಮಾಡಿದ್ದೀರಿ ಎಂದರೆ ಸಾಕ್ಷಿಯು ಸುಳ್ಳು ಕೇಸು ಮಾಡಿಲ್ಲ, ಸತ್ಯ ಕೇಸು ಮಾಡಿದ್ದೇವೆ, ನಮಗೆ ಅನ್ಯಾಯ ಆಗಿದೆ ಎನ್ನುತ್ತಾರೆ. ಹುಲುಗಪ್ಪ, ಅಂಬಣ್ಣ & ಶಿವಣ್ಣ ರವರ ಹೊಲಗಳು ನಿಮ್ಮ ಹೊಲದ ಅಕ್ಕಪಕ್ಕದಲ್ಲಿವೆ ಎಂದರೆ ಸಾಕ್ಷಿಯು ಹುಲಿಗೇಶ್, ನನ್ನ ಅಣ್ಣನ ಮಗ ಅಂಬಣ್ಣ & ಶಿವಪ್ಪರವರ ಹೊಲಗಳಿವೆ ಎನ್ನುತ್ತಾರೆ.

9. ನಾನು ಹೊಲದಲ್ಲಿ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೆ. ಆಗ ನಾನು, ಚಾಸಾ-1, 4 ರಿಂದ 6 ರವರು ಇದ್ದೆವು. ನನ್ನೊಂದಿಗೆ ಅವರ ಹೇಳಿಕೆಗಳನ್ನೂ ಸಹ ಪಡೆದರು ಎಂದರೆ ಸರಿ.

10. ಸರ್ವೆ ನಂ.175 ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಚಾಸಾ-1 ರವರು ವೀರೇಶಪ್ಪನಿಗೆ ನಮ್ಮ ಹೊಲ ಒಣಗಿದೆ ಅವನಿಗೆ ನೀರು ಏಕೆ ಕೊಟ್ಟೆರಿ ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಚಾಸಾ-4 ರವರು 1ನೇ ಆರೋಪಿಗೆ ಕರೆ ಮಾಡಿದಾಗ 1ನೇ ಆರೋಪಿ ನೀನು ಎಲ್ಲಿದ್ದೀಯೋ ಅಲ್ಲಿಯೇ ಇರು ನಾನು ಬರುತ್ತೇನೆ ಎಂದು ಹೇಳಿದ ವಿಷಯವನ್ನು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ 1 ಗಂಟೆಗೆ ಹೊಲಕ್ಕೆ ಬಂದಿದ್ದ ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಆರೋಪಿತರು ಚಾಸಾ-4 ರವರನ್ನು ನೆಲಕ್ಕೆ ಕೆಡವಿ ಒದ್ದರು ಎಂದು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳನ್ನು ನಿಮ್ಮ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ.

11. ಎಲ್ಲಾ ಆರೋಪಿತರು ಚಾಸಾ-4 ರವರನ್ನು ನೆಲಕ್ಕೆ ಕೆಡವಿ ಒದ್ದಿಲ್ಲ ಎಂದರೆ ಸರಿಯಲ್ಲ. 2 ರಿಂದ 4 ನೇ ಆರೋಪಿತರು ನಿಮ್ಮ ತಲೆ ಕೂದಲು ಹಿಡಿದು ಎಳೆದಾಡಿ, ಕೈಗಳಿಂದ ತಲೆಗೆ, ಬೆನ್ನಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿ ಕುಡುಗೋಲಿನಿಂದ ಚಾಸಾ-5 ರವರಿಗೆ ಹೊಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಬಿಡಿಸಲು ಬಂದಾಗ 1ನೇ ಆರೋಪಿ ಆಕೆಯನ್ನು ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಬಾಯಿಗೆ ಬಂದಂತೆ ಬೈದು, ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಕುಡುಗೋಲನ್ನು ನಿಮ್ಮ ಹೊಲದಲ್ಲಿ ಬಿಸಾಕಿ ಹೋಗಿಲ್ಲ

ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಘಟನೆ ನಡೆಯದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಕೇಸು ಮಾಡಿದ್ದೀರಿ ಎಂದರೆ ಸರಿಯಲ್ಲ.

12. ಚಾಸಾ-8 ರವರ ಹೊಲ ಗುನ್ಹಾ ಸ್ಥಳದ ಹತ್ತಿರ ಇರುವುದಿಲ್ಲ. ಚಾಸಾ-9 ರವರು ವೀರೇಶ್ ರವರ ತಮ್ಮ ಇರುತ್ತಾರೆ.

<u>ಮರು ವಿಚಾರಣೆ ಇಲ್ಲ</u>.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**